ಓ.ಎಸ್. ನಂಃ 198/2019

**ಡಿ.ಡಬ್ಲ್ಯೂಃ 1**

**ದಿನಾಂಕ 24.03.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಪ್ರತಿವಾದಿಯ ಪರ: ಶ್ರೀ ಕೆ.ಬಿ.ಜಿ. ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಮತದಾರರ ಚುನಾವಣಾ ಪಟ್ಟಿಯ ದೃಢಿಕೃತ ನಕಲನ್ನು ನಿಡಿ.3 ಎಂದು, ವಂಶವೃಕ್ಷ ಪ್ರಮಾಣ ಪತ್ರದ ದೃಢಿಕೃತ ನಕಲನ್ನು ನಿಡಿ.4 ಎಂದು, ಪಹಣಿಗಳನ್ನು ನಿಡಿ.5 ಎಂದು, ಮಾಹಿತಿ ಹಕ್ಕು ಕಾಯ್ದೆಯ ಅಡಿ ನೀಡಿರುವ ಮಾಹಿತಿಯನ್ನು ಮತ್ತು ಪಡಿತರ ಚೀಟಿಯ ದೃಢಿಕೃತ ನಕಲನ್ನು ನಿಡಿ.6 ಮತ್ತು 7 ಎಂದು, ದಿನಾಂಕ 15.11.2018 ರಂದು ತಹಸೀಲ್ದಾರ ರವರ ಹೊರಡಿಸಿದ ಆದೇಶದ ದೃಢಿಕೃತ ನಕಲನ್ನು ನಿಡಿ.8 ಎಂದು, ಅಸಲು ದಾವೆ ಸಂಖ್ಯೆ 518/2014 ರ ದಾವೆಯಲ್ಲಿ ಸಾಕ್ಷಿದಾರರು ನೀಡಿದ ಸಾಕ್ಷಿಯ ಸಾಕ್ಷಿ ವಿಚಾರಣೆಯ ದೃಢಿಕೃತ ನಕಲನ್ನು ನಿಡಿ.9 ಎಂದು, ಸದರಿ ದಾವೆಯಲ್ಲಿ ಸಾಕ್ಷಿ ನೀಡಿದ ಸಾಕ್ಷಿದಾರರಾದ ಕೃಷ್ಣಾಜೀ ರಾವ್ ಬಿನ್ ಸಿದ್ದೋಜಿ ರಾವ್ ರವರು ಮರಣ ಹೊಂದಿದ್ದಾರೆ ಎಂದು ಸಾಕ್ಷಿಯು ಹೇಳಿದ ಕಾರಣ ಸದರಿ ಸಾಕ್ಷಿದಾರರು ಮರಣ ಹೊಂದಿರುವ ಕಾರಣ ಅವರ ಸಾಕ್ಷಿ ವಿಚಾರಣೆ ದೃಢಿಕೃತ ನಕಲನ್ನು ನಿಡಿ.10 ಎಂದು ಗುರುತಿಸಲಾಯಿತು.

**ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಾಲಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ.**